**ಸಾಕ್ಷಿಯನ್ನು ದಿಃ 06.03.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎನ್.ಎನ್. ವಕೀಲರಿಂದಃ**

ನನಗೆ ಮಂಜೂರಾದ ಜಮೀನಿನ ಸರ್ವೇ ನಂಬರ್ 32 ಆಗಿರುತ್ತದೆ. ಸರ್ವೇ ನಂಬರ್ 32 ರಲ್ಲಿ ಒಟ್ಟು ಎಷ್ಟು ಜಮೀನು ಇದೆ ನನಗೆ ಗೊತ್ತಿಲ್ಲ. ಸರ್ವೇ ನಂಬರ್ 32 ರಲ್ಲಿ ನನ್ನನ್ನು ಸೇರಿ 9 ಜನ ಸ್ವಾಧೀನದಲ್ಲಿರುತ್ತೇವೆ. ಸ್ವಾಧೀನದಲ್ಲಿರುವವರು ಸಿದ್ಧಪ್ಪ, ಗುಡಿಯಪ್ಪ, ಕರಿಬೀರಪ್ಪ, ಸಿದ್ದಪ್ಪ, ಗಂಗಪ್ಪ, ರಾಮಪ್ಪ, ವೆಂಕಟಪ್ಪ ಮತ್ತು ವೆಂಕಟಪ್ಪ ಆಗಿರುತ್ತಾರೆ. ಪ್ರತಿವಾದಿಯ ಜಮೀನು ಯಾವ ಸರ್ವೇ ನಂಬರ್ ನಲ್ಲಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೇ ನಂಬರ್ 32 ರಲ್ಲಿ ಯಾರು ಯಾರು ಎಷ್ಟು ಎಷ್ಟು ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿರುತ್ತಾರೆಂದು ನನಗೆ ಗೊತ್ತಿಲ್ಲ. ಸರ್ವೇ ನಂಬರ್ 32 ಸರ್ಕಾರಿ ಗೋಮಾಳ ಜಮೀನು ಆಗಿರುತ್ತದೆ. ಸರ್ವೇ ನಂಬರ್ 32 ರಲ್ಲಿ ಸ್ವಾಧೀನದಲ್ಲಿರುವ ಎಲ್ಲರಿಗೂ ಸರ್ಕಾರದಿಂದ ಜಮೀನು ಮಂಜೂರಾಗಿರುತ್ತದೆ. ಮಂಜೂರಾದ ನಂತರ ಸರ್ವೇ ನಂಬರ್ 32 ರಲ್ಲಿ ಉಳಿಕೆ ಜಮೀನು ಎಷ್ಟಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೇ ನಂಬರ್ 32 ರಲ್ಲಿ ಸ್ವಾಧೀನದಲ್ಲಿರುವ ಎಲ್ಲರಿಗೂ ಒಂದೇ ಸಾರಿ ಮಂಜೂರಾಗಿರುತ್ತದೆ. ಮಂಜೂರಾಗುವ ಮೊದಲು ಅಥವಾ ಮಂಜೂರಾಗುವ ಕಾಲಕ್ಕೆ ಸರ್ವೇ ನಂಬರ್ 32 ಅನ್ನು ಸರ್ವೇ ಮಾಡಿರುತ್ತಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಮಂಜೂರಾದ ನಂತರ ಸರ್ವೇ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮಂಜೂರಾಗುವ ಕಾಲಕ್ಕೆ ಅಥವಾ ಮಂಜೂರಾಗುವ ಮೊದಲು ಸರ್ವೇ ಮಾಡಿಲ್ಲ.

ನನ್ನ ಜಮೀನಿನ ಪಶ್ಚಿಮಕ್ಕೆ ಸರ್ಕಾರಕ್ಕೆ ಸೇರಿದ ಅರಣ್ಯ ಜಮೀನು ಬರುತ್ತದೆ. ಅರಣ್ಯ ಜಮೀನಿನ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ನಮಗೆ ಜಮೀನು ಮಂಜೂರಾದ ನಂತರ ಅರಣ್ಯ ಇಲಾಖೆಯವರು ಅರಣ್ಯ ಜಮೀನಿಗೆ ಬೇಲಿ ಹಾಕಿರುತ್ತಾರೆಂದರೆ ಸರಿಯಲ್ಲ. ಅರಣ್ಯ ಇಲಾಖೆಯವರು ಅರಣ್ಯ ಜಮೀನಿಗೆ ಬೌಂಡರಿ ಫಿಕ್ಸ್ ಮಾಡಿ, ತಂತಿ ಕಂಬಿಯನ್ನು ಹಾಕಿಕೊಂಡು ಹೋಗಿರುತ್ತಾರೆ. ಮಂಜೂರಾದ 1 ವರ್ಷದ ನಂತರ ಆ ರೀತಿ ತಂತಿ ಹಾಕಿರುತ್ತಾರೆ. ಅರಣ್ಯ ಜಮೀನು

ಒತ್ತುವರಿಯಾಗಿದೆ ಎಂದು ಅರಣ್ಯ ಇಲಾಖೆಯವರಿಗೂ ಸರ್ವೇ ನಂಬರ್ 32 ರ ಹಿಡುವಳಿದಾರರಿಗೂ ಗಲಾಟೆಗಳು ನಡೆಯುತ್ತಿವೆ ಎಂದರೆ ಸರಿಯಲ್ಲ. ನಾನು ಒತ್ತುವರಿ ಮಾಡಿಕೊಂಡಿರುವ ಜಮೀನನ್ನು ಬಿಟ್ಟು ಅರಣ್ಯ ಇಲಾಖೆಯವರು ತಂತಿ ಹಾಕಿರುತ್ತಾರೆಂದರೆ ಸರಿ.

ನನ್ನ ಜಮೀನಿನ ಪೂರ್ವ, ಪಶ್ಚಿಮ ಮತ್ತು ದಕ್ಷಿಣಕ್ಕೆ ಸರ್ಕಾರಿ ಜಮೀನು ಇರುತ್ತದೆ, ಉತ್ತರಕ್ಕೆ ಸಿದ್ಧಪ್ಪನ ಜಮೀನು ಇರುತ್ತದೆ. ನನ್ನ ಜಮೀನಿನ ಪೂರ್ವಕ್ಕೆ ಸರ್ಕಾರಿ ಜಮೀನಿನಲ್ಲಿ ಗಂಗಪ್ಪ ಸ್ವಾಧೀನದಲ್ಲಿರುತ್ತಾನೆ. ನನ್ನ ಜಮೀನಿನ ಪಶ್ಚಿಮದ ಕಡೆಗೆ ಅರಣ್ಯ ಇಲಾಖೆಯವರು ತಮ್ಮ ಜಮೀನಿಗೆ ತಂತಿ ಹಾಕಿಕೊಂಡಿರುತ್ತಾರೆ. ನನ್ನ ಜಮೀನಿನ ದಕ್ಷಿಣಕ್ಕೆ ಸರ್ಕಾರಿ ಜಮೀನಿನಲ್ಲಿ ಸೀತಭೈರಪ್ಪ ಇದ್ದನು, ಈಗ ಆತ ಬಿಟ್ಟು ಬಿಟ್ಟಿದ್ದಾನೆ. ನಿ ಪಿ 1 ಸಾಗುವಳಿ ಚೀಟಿಯಲ್ಲಿ ನನ್ನ ಜಮೀನಿನ ಪೂರ್ವಕ್ಕೆ ಗಂಗಪ್ಪನ ಜಮೀನು ತೋರಿಸಿರುತ್ತಾರೆ, ಪಶ್ಚಿಮಕ್ಕೆ ಸರ್ಕಾರಿ ಜಮೀನು ತೋರಿಸಿರುತ್ತಾರೆ, ಉತ್ತರಕ್ಕೆ ಸಿದ್ಧಪ್ಪನ ಜಮೀನು ತೋರಿಸಿರುತ್ತಾರೆ ಮತ್ತು ದಕ್ಷಿಣಕ್ಕೆ ಸೀತಭೈರಪ್ಪನ ಜಮೀನು ತೋರಿಸಿರುತ್ತಾರೆ. ನಾನು ಮೇಲೆ ಹೇಳಿದ ಚೆಕ್ಕುಬಂದಿಯನ್ನು ನಿ ಪಿ 1 ರಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದ ಚೆಕ್ಕುಬಂದಿಯನ್ನು ತೋರಿಸಲು ಮೂಲ ದಾಖಲೆ ಏನು ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ವಾದ ಪತ್ರದಲ್ಲಿ ದಾವಾ ಸ್ವತ್ತಿನ ಪೂರ್ವಕ್ಕೆ ಸರ್ಕಾರಿ ಜಮೀನು ಮತ್ತು ಪ್ರತಿವಾದಿಯ ಸ್ವತ್ತು ಎಂದು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿರುವ ಚೆಕ್ಕುಬಂದಿಯನ್ನು ತೋರಿಸಲು ಮೂಲ ದಾಖಲೆಗಳನ್ನು ನಾನು ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸರ್ವೇ ಮಾಡುವಾಗ ಸರ್ವೇ ಇಲಾಖೆಯವರು ಸರ್ವೇ ನಂಬರ್ 32 ರಲ್ಲಿ ಸ್ವಾಧೀನದಲ್ಲಿರುವ ಜನರಿಗೆ ನೋಟೀಸ್ ಅನ್ನು ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೇ ನಂಬರ್ 32 ರಲ್ಲಿ ಎಷ್ಟು ಸಬ್ ನಂಬರ್ ಗಳಾಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನನ್ನ ಹಳೆಯ ಸರ್ವೇ ನಂಬರ್ 32 ಇದ್ದು, ಈಗ ಹೊಸ ನಂಬರ್ 79 ಆಗಿರುತ್ತದೆ ಎಂದು ನುಡಿಯುತ್ತಾರೆ.

ಪ್ರತಿವಾದಿಯು ನನ್ನ ಜಮೀನಿನಲ್ಲಿ ದನಗಳನ್ನು ಮೇಯಿಸುವುದು ಮತ್ತು ಮಣ್ಣು ಗುಂಡಿಗಳನ್ನು ತೋಡಿ, ನನ್ನ ಸ್ವಾಧೀನಕ್ಕೆ ತೊಂದರೆ ಕೊಟ್ಟಿದ್ದರಿಂದ ಆತನ ವಿರುದ್ಧ ದಾವೆ ಹೂಡಿರುತ್ತೇನೆ. ನನ್ನ ವಾದ ಪತ್ರದಲ್ಲಿ ದನಗಳನ್ನು ಮೇಯಿಸುವ ಬಗ್ಗೆ ಮತ್ತು ಮಣ್ಣು ಗುಂಡಿಗಳನ್ನು ತೋಡಿರುವಬಗ್ಗೆ ಹೇಳಿ ಬರೆಸಿಲ್ಲ. ಸಾಕ್ಷಿ ಮುಂದುವರೆದು ನನಗೆ ತೊಂದರೆ ಕೊಡುತ್ತಿದ್ದಾನೆಂದು ನಾನು ವಕೀಲರಿಗೆ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಈ ದಾವೆಯಲ್ಲಿ ಜಮೀನಿನ ಪೂರ್ವಕ್ಕೆಪ್ರತಿವಾದಿಯ ಜಮೀನು ಇದ್ದು, ಆತ ನನ್ನ ಜಮೀನನ್ನು ಒತ್ತುವರಿ ಮಾಡುತ್ತಿದ್ದಾನೆಂದು ಹೇಳಿ ಬರೆಸಿಲ್ಲ. ಪ್ರತಿವಾದಿಯು 2 ಎಕರೆ ಜಮೀನಿನ ಮಂಜೂರಾತಿಗಾಗಿ ತಹಶೀಲ್ದಾರ್ ಕಛೇರಿಗೆ ಅರ್ಜಿ ಕೊಟ್ಟಿದ್ದನು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು 1998 ರಿಂದ ತನಗೆ ಸೇರಿದ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತಾನೆಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಯ ಜಮೀನಿನ ಪೂರ್ವಕ್ಕೆ ಗುಡಿಯಪ್ಪನ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ, ಪಶ್ಚಿಮಕ್ಕೆ ನನ್ನ ಜಮೀನು ಬರುತ್ತದೆ ಎಂದರೆ ಸಾಕ್ಷಿ ಅವರು ಹೇಳಬಹುದು, ಪಶ್ಚಿಮಕ್ಕೆ ನಾನು ಇರುತ್ತೇನೆ, ಅವರ ಜಮೀನು ಅಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯ ಜಮೀನಿನ ಉತ್ತರಕ್ಕೆ ರಾಮಪ್ಪನ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ದಕ್ಷಿಣಕ್ಕೆ ಸೀತಭೈರಪ್ಪನ ಜಮೀನು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ಈ ದಾವೆಯಲ್ಲಿ ಏನು ತಕರಾರು ಸಲ್ಲಿಸಿರುತ್ತಾನೆ, ಏನು ದಾಖಲೆಗಳನ್ನು ಸಲ್ಲಿಸಿರುತ್ತಾನೆಂದು ನಾನು ಕೇಳಿ ತಿಳಿದುಕೊಂಡಿಲ್ಲ. ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿಲ್ಲ, ಪ್ರತಿವಾದಿಯು ನನಗೆ ಯಾವುದೇ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಜಮೀನು ಅರಣ್ಯಕ್ಕೆ ಸೇರಿರುವ ಜಮೀನಿನಾಗಿದ್ದು, ನಾನು ಒತ್ತುವರಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲೆಗಳನ್ನು ಕೊಟ್ಟು, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಅಜಿತ್ ದೇವರಮನಿ)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಬಂಗಾರಪೇಟೆ**